ಅಲ್ಲಿಂದ ಪಡೆದುಕೊಂಡು ಯಾರ್ಯಾರ ಮೇಲೆ ಮೊಕದ್ದಮೆಗಳನ್ನು ಹಾಕಲಾಗಿದೆ ಎಂಬುದನ್ನು ನೋಡಿ, ಕಾನೂನು ಕ್ರಮಗಳ ಮೇರೆಗೆ ತಾವುಗಳು ಹೇಳಿದ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ಸರಕಾರದವರು ಹಾಕಿದ ಮೊಕದ್ದಮೆಗಳನ್ನು ಈ ಕೂಡಲೇ ವಾಪಸ್ ತೆಗೆದುಕೊಳ್ಳಬೇಕು. ಈಗ ಸರಕಾರದವರು ಕೈಗೊಂಡಿರತಕ್ಕಂಥ ಕ್ರಮಗಳು ಅಕ್ರಮವಾಗಿವೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸಚಿವರು ಆ ಕುರಿತು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈಗಾಗಲೇ ಹೇಳಿದ್ದಾರೆ, ಪುನಃ ತಾವುಗಳು ಏಕೆ ಮಾತನಾಡುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್: ಸರಕಾರವು ಕನ್ನಡಿಗರ ಮೇಲೆ ಬೆಳಗಾವಿಯಲ್ಲಿ ದೌರ್ಜನ್ಯವನ್ನು ಮಾಡಿದೆ. ಕನ್ನಡಿಗರ ಮೇಲೆ ಅಂದು ಹಾಕಿದ ಮೊಕದ್ದಮೆಗಳನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಲೇಬೇಕು... ಸರಕಾರದ ಈ ಕನ್ನಡಿಗರ ಬಂಧನದ ಕ್ರಮವನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಸರಕಾರದವರು ಕೊಡಬೇಕು..

ಉಪಾಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಈ ವಿಷಯವು ಇಲ್ಲಿಗೆ ಮುಕ್ತಾಯವಾಗಿದೆ. ಈಗ ಗುರುನಾಥ್‌ರವರು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಿ.

(ಆ) ಶಹಬಾದ್‌ನ ಎಚ್‌ಎಂಪಿ ಸಿಮೆಂಟ್ ಕಾರ್ಖಾನೆ ಬಗ್ಗೆ.

+ ಶ್ರೀ ಸಿ.ಗುರುನಾಥ್ (ಶಹಬಾದ್): ಮಾನ್ಯ ಅಧ್ಯಕ್ಷರೇ, ನಾನು ಮೊನ್ನೆ ಎಚ್‌ಎಂಪಿ ಸಿಮೆಂಟ್ ಕಾರ್ಖಾನೆಯ ಬಗ್ಗೆ ಸದನದ ಗಮನಕ್ಕೆ ವಿಚಾರವನ್ನು ತರಲು ಪ್ರಯತ್ನ ಮಾಡಿದ್ದೆ. ಸುಮಾರು 85 ವರ್ಷಗಳಿಗಿಂತ ಮುಂಚೆಯೇ ಕರ್ನಾಟಕ ರಾಜ್ಯದ ಗುಲಬರ್ಗ ಜಿಲ್ಲೆಯ ಶಹಬಾದ್‌ನಲ್ಲಿ ಆಗಿತ್ತು. ಆ ಕಾರ್ಖಾನೆಯಲ್ಲಿ ಸುಮಾರು 10 ಸಾವಿರ ಜನರು ಕೆಲಸ ಮಾಡುತ್ತಾ ಇದ್ದರು. ಈ ವೆಟ್‌ಪ್ರಾಸೆಸ್ ಸಿಮೆಂಟ್ ಟೆಕ್ನಾಲಜಿಗೆ ಅನುಗುಣವಾಗಿ ಏಳುವರ್ಷಗಳಿಗಿಂತ ಮುಂಚೆ ಟಾಟನವರ ಹತ್ತಿರ ಇತ್ತು. ತದನಂತರ ಎಸಿಸಿ ಸಿಮೆಂಟ್‌ನವರದ್ದಾಯಿತು, ಎಸಿಸಿಯವರು ಎಚ್‌ಎಂಟಿ ಕಲ್ಕತ್ತಾ ಗ್ರೂಪ್‌ನವರಿಗೆ ಸಂಬಂಧಪಟ್ಟಂಥ ಹೇಮರಾಜ್ ಮಹಾವೀರ್ ಪೋತದಾರ್ ಎನ್ನುವರಿಗೆ ಮಾರಾಟ